# ಕರ್ನಾಟಕದಲ್ಲಿ ತಾತ್ತ್ವಿಕ ಸಮನ್ವಯ, ರಾಮಕೃಷ್ಣ ಭಾವಧಾರೆ

ಸ್ವಾಮಿ ನಿತ್ಯಸ್ಥಾನಂದ

ಶ್ರೀರಾಮಕೃಷ್ಣರಲ್ಲಿ ಸಮನ್ವಯವೆಂಬುದು ಹಲವು ನೆಲೆಗಳಲ್ಲಿ ವ್ಯಕ್ತಗೊಂಡ ತತ್ತ್ವವಾಗಿತ್ತು. ಅದು ಕರ್ನಾಟಕದಲ್ಲಿ ಸ್ವೀಕೃತವಾಗಲು ಇಲ್ಲಿ ಆಗಲೇ ಮೂಡಿಬಂದಿದ್ದ ಧಾರ್ಮಿಕ, ತಾತ್ತ್ವಿಕ ಸಮನ್ವಯವು ಸಹಕಾರಿಯಾಯಿತೆಂಬ ಅಂಶವನ್ನಿಲ್ಲಿ ವಿಶ್ಲೇಷಿಸಲಾಗಿದೆ. ಲೇಖಕರು 'ವಿವೇಕಪ್ರಭ'ದ ಮೊದಲನೆಯ ಸಂಪಾದಕರಾಗಿದ್ದರು; ಹಾಗೂ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಪೂಜ್ಯ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ಶ್ರೀರಾಮಕೃಷ್ಣರನ್ನು ಸಮನ್ವಯಾಚಾರ್ಯರು ಎಂದು ಕರೆಯಲಾಗಿದೆ. ಎಲ್ಲ ಬಗೆಯ ತಾತ್ತ್ವಿಕ ಚಿಂತನೆಗಳೂ ಅವರ ವಿಚಾರ ಸಾಗರದಲ್ಲಿ ಒಂದಾಗುತ್ತವೆ. ಎಲ್ಲ ಆಧ್ಯಾತ್ಮಿಕ ಭಾವಗಳೂ ಅವರ ಭಾವಸಾಗರದಲ್ಲಿ ಬಂದು ಸೇರುತ್ತವೆ. ಅವರು ಧರ್ಮೋದ್ಯಾನದಲ್ಲಿ ವಿವಿಧ ಪುಷ್ಪಗಳ ಸೌಂದರ್ಯವನ್ನು ಸವಿಯುತ್ತ ವಿಹರಿಸಿದರು. ಎಲ್ಲ ಧರ್ಮಪುಷ್ಪಗಳ ಮಕರಂದವನ್ನೂ ದುಂಬಿಯಂತೆ ಆಸ್ವಾದಿಸಿದರು. ಧರ್ಮವೇ ಬೇರೆ, ಅಧ್ಯಾತ್ಮವೇ ಬೇರೆ ಎನ್ನುವಂತಹ ಸನ್ನಿವೇಶದಲ್ಲಿ ಧರ್ಮ ಮತ್ತು ಅಧ್ಯಾತ್ಮಗಳ ಸಮನ್ವಯವನ್ನು ಉಂಟುಮಾಡಿದರು. ಹೋಮ-ಹವನ, ಹಬ್ಬ, ಉತ್ಸವಾದಿಗಳಿಂದ ಕೂಡಿದ ಸಾಮೂಹಿಕ ಧರ್ಮ ಮತ್ತು ಸಮಾಜವಿಮುಖಿಯಾದ, ಸ್ವಂತ ಮುಕ್ತಿ, ಆಧ್ಯಾತ್ಮಿಕ ಅನುಭವವೇ ಪ್ರಧಾನವಾದ ವೈಯಕ್ತಿಕ ಧರ್ಮ ಇವುಗಳ ಸಮನ್ವಯವೂ ಅವರಿಂದ ಆಯಿತು. ತಾವೂ ಸಮಾಜದ ಮಧ್ಯೆಯೇ ಇದ್ದು ಸಾಧನೆ ಮಾಡಿದರು ಹಾಗೂ ತಮ್ಮ ಅನುಯಾಯಿಗಳಿಗೂ ಸಮಾಜದಿಂದ ದೂರವಾಗಿ ಕಾಡಿಗೋ ಹಿಮಾಲಯಕ್ಕೋ ಹೋಗಿ ಸಾಧನೆ ಮಾಡಬೇಕೆಂದು ಬೋಧಿಸಲಿಲ್ಲ. ತಾವೇ ಸ್ವತಃ ಹಬ್ಬ ಉತ್ಸವಗಳಲ್ಲಿ ಭಾಗವಹಿಸಿ ಅಲ್ಲಿ ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸುತ್ತಿದ್ದರು. ಅವರಲ್ಲಿ ಶ್ರದ್ಧೆ ಮತ್ತು ವೈಚಾರಿಕತೆಗಳ ಸಮನ್ವಯವನ್ನೂ ಕಾಣುತ್ತೇವೆ. ತಮ್ಮನ್ನೂ ವಿಚಾರ ಮಾಡಿ ಸ್ವೀಕರಿಸಬೇಕೆಂದು ಅವರು ಬಯಸುತ್ತಿದ್ದರು. ನರೇಂದ್ರನ ವೈಚಾರಿಕತೆಗೂ ತಲೆಬಾಗಿದರು, ಗಿರೀಶನ ಶ್ರದ್ಧೆಯನ್ನೂ ಕೊಂಡಾಡಿದರು. ಸಾಧನೆಯಲ್ಲಿ ಮುಂದುವರಿದಂತೆಲ್ಲ ಕರ್ಮಗಳು ತಾವಾಗಿಯೇ ಬಿದ್ದುಹೋಗುವುದೆಂದು ಹೇಳಿದ್ದರೂ ಜ್ಞಾನ-ಕರ್ಮಗಳ ಸಮುಚ್ಚಯವನ್ನು ಖಂಡಿಸಲಿಲ್ಲ. ಹೀಗೆ ಶ್ರೀರಾಮಕೃಷ್ಣರು ಸರ್ವಸಮನ್ವಯಗಳ ಸಮನ್ವಯ ಮೂರ್ತಿ.

ಇಂಥ ಸಮಯಾನ್ವಿತ ರಾಮಕೃಷ್ಣ ಭಾವಧಾರೆಯು ಕರ್ನಾಟಕವನ್ನು ಪ್ರವೇಶಿಸಿದಾಗ ಅದಕ್ಕೆ ಅಭೂತಪೂರ್ವ, ಅವಿರೋಧದ ಸ್ವಾಗತ ಸಿಕ್ಕಿತು. ಬಹುಶಃ ಇದಕ್ಕೆ ಕಾರಣ ಈ ರಾಜ್ಯದಲ್ಲಿ ಆಗಲೇ ವಿವಿಧ ಮತಪಂಥಗಳು ಬಂದು ಸಮನ್ವಯಗೊಂಡಿದ್ದವು.

ಶ್ರೀಶಂಕರಾಚಾರ್ಯರು ಕರ್ನಾಟಕದ ಶೃಂಗೇರಿಯಲ್ಲಿ ತಮ್ಮ ಮಠಸ್ಥಾಪನೆ ಮಾಡಿ ಇಲ್ಲಿ ಅದ್ವೈತಮತ ಪ್ರಚಾರಕ್ಕೆ ಬುನಾದಿ ಹಾಕಿದ್ದರು. ಅದ್ವೈತ ಸಿದ್ಧಾಂತದ ಪ್ರಕಾರ ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯೆ ಹಾಗೂ ಜೀವಾತ್ಮ ಮತ್ತು ಪರಮಾತ್ಮ ಬೇರೆ ಅಲ್ಲ (**ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಽಪರಃ**). ಹೀಗಿದ್ದರೂ ಅದ್ವೈತಿಗಳು ದೇವಾಲಯ, ಪೂಜೆ, ಹೋಮ-ಹವನ ಮುಂತಾದ ಕರ್ಮೋಪಾಸನೆಗಳನ್ನು ಕಡೆಗಣಿಸುವುದಿಲ್ಲ - ಅದ್ವೈತ ಸ್ಥಿತಿಯನ್ನು ಮುಟ್ಟಲು ಪರೋಕ್ಷ ಸಾಧನೆಗಳೆಂದು ಸ್ವೀಕರಿಸುತ್ತಾರೆ. ಹೀಗಾಗಿ ಎಲ್ಲ ರೀತಿಯ ಪೂಜಾವಿಧಾನಗಳನ್ನೂ ದೇವದೇವಿಯರನ್ನೂ ಅವರು ಸ್ವೀಕರಿಸುತ್ತಾರೆ. ಅವರ ಪಾಲಿಗೆ ಎಲ್ಲ ದೇವದೇವಿಯರೂ ಆತ್ಯಂತಿಕ ಅದ್ವೈತ ಸತ್ಯದ ಸಾಂಕೇತಿಕ ರೂಪಗಳು. ಶ್ರೀಶಂಕರಾಚಾರ್ಯರೇ ಎಲ್ಲ ದೇವದೇವಿಯರ ಮೇಲೆ ಸ್ತೋತ್ರ ರಚನೆ ಮಾಡಿದ್ದಾರೆ. ಇದರಿಂದಾಗಿ ಸಮನ್ವಯಾತ್ಮಕ ಧರ್ಮ ಈ ನಾಡಿನಲ್ಲಿ ಪ್ರಚಲಿತವಾದಂತಾಯಿತು. ಆಗಿನ ಕಾಲದಲ್ಲಿ ಪ್ರಚಲಿತವಿದ್ದ ವಾಮಾಚಾರ ಪಂಥಗಳಿಂದ ಜನರು ವಿಮುಖರಾಗುವಂತಾಯಿತು.

ಅದ್ವೈತ ಸಿದ್ಧಾಂತದ ಪ್ರಕಾರ ನಿಷ್ಕಾಮ ಕರ್ಮದ ಮೂಲಕ ಚಿತ್ತಶುದ್ಧಿಯುಂಟಾಗಿ ಅದು ಸಗುಣೋಪಾಸನೆಗೆ ದಾರಿಮಾಡಿಕೊಡುತ್ತದೆ. ಸಗುಣೋಪಾಸನೆಯೆಂದರೆ ಭಗವಂತನನ್ನು ಸಗುಣ ರೂಪದಲ್ಲಿ ಉಪಾಸಿಸುವುದು, ಧ್ಯಾನಿಸುವುದು, ಜಪಿಸುವುದು, ಪ್ರಾರ್ಥಿಸುವುದು ಇತ್ಯಾದಿ. ಇದರಿಂದ ಮನಸ್ಸು ತುಂಬ ಹರಿತವಾಗುತ್ತದೆ. ಆಗ ನಿರ್ಗುಣೋಪಾಸನೆಗೆ ಮನಸ್ಸು ಸಿದ್ಧವಾಗುತ್ತದೆ. ನಂತರ ಶ್ರವಣ-ಮನನ-ನಿದಿಧ್ಯಾಸನಗಳ ಮೂಲಕ ಪರಬ್ರಹ್ಮನೊಡನೆ ಐಕ್ಯಾನುಭೂತಿಯನ್ನು ಪಡೆಯಲು ಸಾಧ್ಯವಾಗುತ್ತದೆ.




ಈ ರೀತಿಯ ಶ್ರೇಣೀಕೃತ ಸಾಧನೆ ಪದ್ಧತಿಯ ಮೂಲಕ ಎಲ್ಲ ಬಗೆಯ ಸಾಧನೆಗಳಿಗೂ ಮಾನ್ಯತೆ ದೊರೆತಂತಾಯಿತು.

ಶ್ರೀಶಂಕರಾಚಾರ್ಯರು ಎಷ್ಟೇ ಭಕ್ತಿಪರ ಸ್ತೋತ್ರಗಳನ್ನು ರಚಿಸಿದ್ದರೂ, ಅನೇಕ ಬಗೆಯ ದೇವದೇವತಾ ಪೂಜಾವಿಧಾನಗಳನ್ನು ಪರಿಚಯಿಸಿದ್ದರೂ, ಅವರ ಸಿದ್ಧಾಂತವು ಜ್ಞಾನಪ್ರದವೇ ಆಗಿತ್ತು. ತಮ್ಮ 'ವಿವೇಕಚೂಡಾಮಣಿ' ಗ್ರಂಥದಲ್ಲಿ ಭಕ್ತಿಯನ್ನು ಪ್ರಸ್ತಾಪಿಸಿದ್ದರೂ **'ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೇ'** 'ತನ್ನ ನಿಜ ಸ್ವರೂಪವನ್ನು ಧ್ಯಾನಿಸುವುದೇ ಭಕ್ತಿ' - ಎಂದು ಅವರು ನಿರ್ವಚಿಸಿದ್ದಾರೆ. ಇಲ್ಲಿ ಭಕ್ತಿಯೂ ಜ್ಞಾನದ ಸ್ವರೂಪವನ್ನೇ ಪಡೆಯುತ್ತದೆ. ಆದರೆ ಮನುಷ್ಯನಲ್ಲಿ ವಿಚಾರಶಕ್ತಿಯ ಜೊತೆಗೆ ಭಾವಶಕ್ತಿಯೂ ಇದೆ. ಮನುಷ್ಯನ ಭಾವಕ್ಕೂ ಪುಷ್ಟಿ ನೀಡುವಂತಹ ಧರ್ಮದ ಆವಶ್ಯಕತೆಯಿತ್ತು. ಇಲ್ಲದಿದ್ದರೆ ಧರ್ಮವು ಕೇವಲ ಒಣ ಚರ್ಚೆಯಲ್ಲಿಯೇ ಪರ್ಯವಸಾನಗೊಳ್ಳುತ್ತದೆ.

ಈ ಸನ್ನಿವೇಶದಲ್ಲಿ ಅವತಾರವೆತ್ತಿದವರು ಶ್ರೀರಾಮಾನುಜಾಚಾರ್ಯರು. ಅವರು ಭಕ್ತಿಪ್ರಧಾನ ಧರ್ಮವನ್ನು ತಮಿಳುನಾಡಿನಿಂದ ಕರ್ನಾಟಕಕ್ಕೆ ತೆಗೆದುಕೊಂಡು ಬಂದರು. ತಮಿಳುನಾಡಿನ ಆಳ್ವಾರರು ಈ ಭಕ್ತಿಮಾರ್ಗವನ್ನು ಅನುಸರಿಸುತ್ತಿದ್ದರು. ಈ ಭಕ್ತಿ ಸಂಪ್ರದಾಯಕ್ಕೆ ಔಪನಿಷದಿಕ ತಾತ್ತ್ವಿಕ ಚೌಕಟ್ಟನ್ನು ಒದಗಿಸಿ ಅದನ್ನು ವೇದಾಂತದ ಭಾಗವಾಗಿ ರೂಪಿಸಿದವರು ಶ್ರೀರಾಮಾನುಜರು. ತಮಿಳುನಾಡಿನ ಶೈವಪಂಥದ ಚೋಳರಾಜರ ವಿರೋಧದಿಂದಾಗಿ ಶ್ರೀರಾಮಾನುಜರು ಕರ್ನಾಟಕಕ್ಕೆ ಬರಬೇಕಾಯಿತು. ಮೇಲುಕೋಟೆಯನ್ನು ತಮ್ಮ ಕೇಂದ್ರವನ್ನಾಗಿಸಿಕೊಂಡು ವಿಶಿಷ್ಟಾದ್ವೈತ ತತ್ತ್ವವನ್ನು ಇಲ್ಲಿ ಪ್ರಚಾರ ಮಾಡಿದರು. ಶ್ರೀರಾಮಾನುಜ ಸಿದ್ಧಾಂತದ ಪ್ರಕಾರ ಬ್ರಹ್ಮವೂ ಸತ್ಯ ಜಗತ್ತೂ ಸತ್ಯ; ಜೀವಾತ್ಮರು ಮತ್ತು ಜಗತ್ ಬ್ರಹ್ಮನ ಅಂಶ-ಅವಿಭಾಜ್ಯ ಅಂಗ. ಆದ್ದರಿಂದ ಭಗವಂತನು ಚಿದಚಿದ್ವಿಶಿಷ್ಟ. ಕರ್ಮದ ಮೂಲಕ ಆತ್ಮಜ್ಞಾನವುಂಟಾಗಿ, ಅದರಿಂದ ಭಗವದ್ಭಕ್ತಿಯ ಉದಯವಾಗಿ, ಮುಂದೆ ಅದೇ ಪರಾಭಕ್ತಿಯಾಗಿ ಪಕ್ವಗೊಂಡು, ತಾನು ಭಗವದಂಶ ಎಂಬ ಅನುಭವವಾಗುತ್ತದೆ. ಇದು ಭಕ್ತಿಪ್ರಧಾನ ಧರ್ಮ. ಶ್ರೀಶಂಕರಾಚಾರ್ಯರ ಜ್ಞಾನಪ್ರಧಾನ ಧರ್ಮದೊಂದಿಗೆ ಭಕ್ತಿಪ್ರಧಾನ ಧರ್ಮವೂ ಸೇರಿಕೊಂಡಂತಾಯಿತು. ಫಲವತ್ತಾದ ಭೂಮಿಗೆ ನೀರು ಹಾಯಿಸಿದಂತಾಯಿತು.



ಈ ತತ್ತ್ವ ದ್ವಿವೇಣಿಯೊಂದಿಗೆ ಮುಂದೆ ಇನ್ನೊಂದು ತತ್ತ್ವಧಾರೆಯೂ ಸೇರಿಕೊಂಡು ವೇದಾಂತ ತತ್ತ್ವ ತ್ರಿವೇಣಿಯಾಯಿತು. ಮೂರನೆಯ ಸ್ರೋತ ಯಾವುದೆಂದರೆ ಕರ್ನಾಟಕದಲ್ಲಿಯೇ ಉದಿಸಿದ ಶ್ರೀಮಧ್ವಾಚಾರ್ಯ ಪ್ರಣೀತ ದ್ವೈತವೇದಾಂತ. ಈ ತತ್ತ್ವದಲ್ಲಿ ಭೇದಕ್ಕೆ ಹೆಚ್ಚು ಪ್ರಾಧಾನ್ಯ ನೀಡಲಾಗಿದೆ. ಪ್ರತಿಯೊಂದು ವಸ್ತುವೂ ತನ್ನ ವಿಶಿಷ್ಟ ಗುಣದೊಂದಿಗೆ ಇತರ ಎಲ್ಲದರಿಂದ ತನ್ನನ್ನು ಬೇರ್ಪಡಿಸಿಕೊಳ್ಳುತ್ತದೆ. ಈ ರೀತಿ ಭೇದ ದರ್ಶನವಿಲ್ಲದಿದ್ದರೆ ವ್ಯವಹಾರವೂ ಇರುವುದಿಲ್ಲ, ಪ್ರಪಂಚವೂ ಇರುವುದಿಲ್ಲ. ಒಂದನ್ನೊಂದು ಪ್ರತ್ಯೇಕಿಸಿಕೊಳ್ಳುವುದೇ ಸೃಷ್ಟಿ. ಜೀವಾತ್ಮ-ಪರಮಾತ್ಮ ಭೇದ, ಸೃಷ್ಟಿ-ಪರಮಾತ್ಮ ಭೇದ, ಜೀವಾತ್ಮ-ಸೃಷ್ಟಿ ಭೇದ, ಜೀವಾತ್ಮ-ಜೀವಾತ್ಮರ ಭೇದ ಮತ್ತು ಜಗತ್ತಿನ ವಸ್ತುಗಳಲ್ಲಿರುವ ಭೇದ - ಹೀಗೆ ಪಂಚ ಭೇದಗಳನ್ನು ದ್ವೈತಿಗಳು ಒಪ್ಪುತ್ತಾರೆ. ಭಗವಂತನು ಸ್ವೇಚ್ಛೆಯಿಂದಲೇ ಪ್ರಕೃತಿಯ ಮೂಲಕ ಪ್ರಪಂಚವನ್ನು ಸೃಷ್ಟಿಸುತ್ತಾನೆ. ಭಗವಂತನೊಬ್ಬನೇ ಸ್ವತಂತ್ರ ವಸ್ತು, ಉಳಿದವೆಲ್ಲವು ಭಗವದಧೀನ.



ದ್ವೈತವೇದಾಂತದ ಮುಖ್ಯವಾದ ಕೊಡುಗೆಯೆಂದರೆ ಹರಿದಾಸ ಸಾಹಿತ್ಯ. ಮಧ್ವಾಚಾರ್ಯರಿಂದ ಒಂದು ದೊಡ್ಡ ದಾಸ ಪರಂಪರೆಯೇ ಸೃಷ್ಟಿಯಾಯಿತು. ಅವರೆಲ್ಲರೂ ದೇವರನಾಮಗಳನ್ನು ರಚಿಸಿ, ಹಾಡುತ್ತ, ಸುತ್ತಾಡುತ್ತ ಎಲ್ಲೆಲ್ಲಿಯೂ ಹರಿಭಕ್ತಿಯನ್ನು ಪ್ರಚಾರ ಮಾಡಿದರು, ಸಮಾಜದಲ್ಲಿ ಒಂದು ವಿಶೇಷ ಬದಲಾವಣೆಯನ್ನು ಉಂಟುಮಾಡಿದರು. ಜನಸಾಮಾನ್ಯರೆಲ್ಲರೂ ಈ ಭಕ್ತಿಗಂಗೆಯಲ್ಲಿ ಸ್ನಾನಗೈಯುವಂತಾಯಿತು. ಪುರಂದರದಾಸರು, ಕನಕದಾಸರು, ಮುಂತಾದ ದಾಸಶ್ರೇಷ್ಠರು ಈ ಪರಂಪರೆಯಲ್ಲಿ ಬಂದವರು. ಅವರು ರಚಿಸಿರುವ ಸಾವಿರಾರು ದೇವರನಾಮಗಳು ಭಕ್ತಿರಸದಿಂದ ತುಂಬಿತುಳುಕುತ್ತಿದ್ದು ಭಕ್ತರ ಹೃದಯದಲ್ಲಿ ಭಕ್ತಿಯನ್ನು ಉದ್ದೀಪನಗೊಳಿಸುತ್ತವೆ, ಹಾಗೂ ಸಾಧನೆಯ ಬಹುಮುಖ್ಯ ಅಂಗವಾಗಿವೆ. ಮನೆಮನೆಯಲ್ಲಿಯೂ ಈ ಭಕ್ತಿಗೀತೆಗಳನ್ನು ಸಾಮೂಹಿಕವಾಗಿ ಹಾಡುವ ಸಂಪ್ರದಾಯ ಸೃಷ್ಟಿಯಾಯಿತು.

ಕರ್ನಾಟಕದಲ್ಲಾದ ಇನ್ನೊಂದು ಅಪೂರ್ವ ಧಾರ್ಮಿಕ ಕ್ರಾಂತಿ ನಮ್ಮ ವಿಶೇಷ ಗಮನವನ್ನು ಸೆಳೆಯುವಂತಹದು. ಗೊಡ್ಡು ಆಚರಣೆಗಳು, ಮೂಢನಂಬಿಕೆಗಳು, ಅವಮಾನೀಯವೆನಿಸುವ ಜಾತಿ-ಲಿಂಗಭೇದಗಳು ಇವೇ ಮುಂತಾದ ದೋಷಪೂರಿತ ಧಾರ್ಮಿಕ ವಾತಾವರಣದಲ್ಲಿ ಹೊಸ ಧಾರ್ಮಿಕ ಬೆಳಕನ್ನು ಚೆಲ್ಲಿದವರು ಶ್ರೀ ಬಸವಣ್ಣನವರೇ ಮುಂತಾದ ಶಿವಶರಣರು. ವೈಚಾರಿಕ ಭಕ್ತಿಮಾರ್ಗ ಇವರ ಸಾಧನೆ. ಈ ಪಂಥದ ಅಪೂರ್ವ ಕೊಡುಗೆ ವಚನ ಸಾಹಿತ್ಯ. ಸಮಾಜದ ಎಲ್ಲ ವರ್ಗದವರೂ ವಚನಗಳನ್ನು ರಚಿಸಿದ್ದಾರೆ. ಈ ವಚನಗಳಲ್ಲಿ ವೈಚಾರಿಕತೆಯೂ ಇದೆ, ಕಾವ್ಯಾಂಶಗಳೂ ಇವೆ, ಅತ್ಯುನ್ನತ ಆಧ್ಯಾತ್ಮಿಕ ಹೊಳಹುಗಳೂ ಇವೆ. ಸಾಮಾಜಿಕ



ಕಳಕಳಿ ಇದೆ, ಧರ್ಮಾಚರಣೆಗಳ ಕಟು ಖಂಡನೆಯೂ ಇದೆ. ಮೌಢ್ಯಗಳ ವಿಡಂಬನೆಯೂ ಇದೆ, ಉದಾತ್ತ ನೈತಿಕ ಚಿಂತನೆಗಳೂ ಇವೆ. ಸಮಗ್ರ ಜೀವನದ ಸಮಸ್ತ ವಿಷಯಗಳನ್ನೂ ವಚನಗಳಲ್ಲಿ ನಾವು ಕಾಣಬಹುದು. ಈ ಆಂದೋಳನದಿಂದಾಗಿ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟಾಯಿತು. ವೀರಶೈವ ಧರ್ಮದ ಆಧಾರದ ಮೇಲೆ ಲಿಂಗಾಯಿತ ಧರ್ಮವೆಂಬ ಒಂದು ಹೊಸ ಪಂಗಡವೇ ಉದಯವಾಯಿತು. ವರ್ಣ, ಲಿಂಗ ಭೇದವಿಲ್ಲದೆ ಎಲ್ಲರಿಗೂ ಲಿಂಗಧಾರಣೆಗೆ ಅವಕಾಶವುಂಟಾಯಿತು. ನಾಡಿನಾದ್ಯಂತ ಸಾವಿರಾರು ಲಿಂಗಾಯಿತ ಮಠಗಳು ಸ್ಥಾಪನೆಗೊಂಡು ಜನಸಾಮಾನ್ಯರಿಗೂ ಶೈವಧರ್ಮವು ತಲುಪುವಂತಾಯಿತು. ಶಿಕ್ಷಣಬಾಹಿರವೂ, ಸಮಾಜಬಾಹಿರವೂ, ಧರ್ಮಬಾಹಿರವೂ ಆಗಿದ್ದ ಕೆಲವು ವರ್ಗಗಳು ಸಮಾಜದ ಮುಖ್ಯವಾಹಿನಿಗೆ ಸೇರುವಂತಾಯಿತು.

ಈ ಎಲ್ಲ ಧಾರ್ಮಿಕ ಧಾರೆಗಳೊಂದಿಗೆ ಮಹಾರಾಷ್ಟ್ರದ ಕಡೆಯಿಂದ ಇನ್ನೊಂದು ಧಾರೆಯೂ ಸೇರಿಕೊಂಡಿತು. ಪಂಢರಾಪುರದ ಕೇಂದ್ರದಿಂದ ಉದ್ಭವಿಸಿದ ಈ ಬೃಹತ್ ಭಕ್ತಿಯ ಅಲೆ ಕರ್ನಾಟಕವನ್ನೂ ವ್ಯಾಪಿಸಿತು. ತುಕಾರಾಮ ಮುಂತಾದ ಸಂತ ಭಕ್ತರ ಹೃದಯಾಂತರಾಳದಿಂದ ಹೊರಹೊಮ್ಮಿದ ಮರಾಠಿ ಅಭಂಗಗಳು ಕರ್ನಾಟಕದಲ್ಲಿಯೂ ಜನಮೆಚ್ಚುಗೆಯನ್ನು ಪಡೆದವು. ಜಲ ಭೂಮಿಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಮಹಾರಾಷ್ಟ್ರಗಳ ನಡುವೆ ಅನೇಕ ವಿರೋಧಗಳಿದ್ದರೂ, ಈ ಭಕ್ತಿಯ ವಿಷಯದಲ್ಲಿ ಯಾವ ವಿರೋಧವೂ ಇಲ್ಲ. ಕನ್ನಡಿಗರು ಮರಾಠಿ ಅಭಂಗಗಳನ್ನೂ ಹಾಡುತ್ತಾರೆ, ಶರಣರ ವಚನಗಳನ್ನೂ ಹಾಡುತ್ತಾರೆ, ದಾಸರ ಪದಗಳನ್ನೂ ಹಾಡುತ್ತಾರೆ. ತ್ಯಾಗರಾಜರ ಕೃತಿ (ತೆಲುಗು)ಗಳನ್ನೂ ಹಾಡುತ್ತಾರೆ. ಈಗ ಶ್ರೀರಾಮಕೃಷ್ಣ ಭಾವಧಾರೆಯ ಪ್ರವೇಶದ ನಂತರ ಬಂಗಾಳೀ ಹಾಡುಗಳನ್ನೂ ಹಾಡುತ್ತಾರೆ.

ಕನ್ನಡಿಗರ ಎಲ್ಲರನ್ನೂ ಒಳಗೊಳ್ಳುವ ಮನೋಭಾವದಿಂದಾಗಿ ಅನೇಕ ಮತಪಂಥಗಳು, ಭಕ್ತಿಪಂಥಗಳು ಕರ್ನಾಟಕದಲ್ಲಿ ನೆಲೆಯೂರುವಂತಾಯಿತು. ಶ್ರೀರಾಮಕೃಷ್ಣ ಭಾವಧಾರೆಯ ಪ್ರವೇಶಕ್ಕೆ ಕ್ಷೇತ್ರ ಸಿದ್ಧವಾಗಿತ್ತು. ಆದರ್ಶಪ್ರಾಯ ಸಮನ್ವಯಾತ್ಮಕ ಚಿಂತನಾ ಕಾಂತಿಯನ್ನು ಪ್ರತಿಬಿಂಬಿಸಲು ಆದರ್ಶ (ಕನ್ನಡಿ) ಸಿದ್ಧವಾಗಿತ್ತು. ಸ್ವಾಮಿ ವಿವೇಕಾನಂದರ ಪಾದಸ್ಪರ್ಶದಿಂದ ಕ್ಷೇತ್ರ ಹಸನಾಯಿತು. ಶ್ರೀಮಾತೆ ಶಾರದಾದೇವಿಯವರ ಪ್ರೇಮಗಂಗೆಯಿಂದ ಕ್ಷೇತ್ರ ಮತ್ತೂ ಫಲವತ್ತಾಯಿತು. ಶ್ರೀರಾಮಕೃಷ್ಣರ ಭಾವಧಾರೆ, ಮತಭೇದವಿಲ್ಲದೆ, ವರ್ಣಭೇದವಿಲ್ಲದೆ ಸ್ವೀಕಾರಾರ್ಹವಾಯಿತು. ಇಲ್ಲಿನ ಅನೇಕ ಧಾರ್ಮಿಕ ಸಂಪ್ರದಾಯಗಳು ಸಮಾಜದ ಬೇರೆ ಬೇರೆ ವರ್ಗಗಳಿಗೆ ಸೀಮಿತವಾದವುಗಳು. ಆದರೆ ಶ್ರೀರಾಮಕೃಷ್ಣ ಭಾವಧಾರೆಯು ಎಲ್ಲ ವರ್ಗದವರಿಗೂ ತೆರೆದ ಬಾಗಿಲು. ಅದು ಯಾವುದೇ ಸಮೂಹಕ್ಕೂ ಸೀಮಿತವಾಗದೆ ಇರುವುದರಿಂದ ಎಲ್ಲ ಸಮೂಹದವರಿಗೂ ಇಲ್ಲಿ ಸ್ವಾಗತವಿದೆ. ಇದಕ್ಕೆ ಮುಖ್ಯ ಕಾರಣ, ಶ್ರೀ ಕುವೆಂಪು ಅವರು ಹೇಳುವಂತೆ, ''ಶ್ರೀರಾಮಕೃಷ್ಣ ಮಹಾಸಂಘದ ರೀತಿಯೇ ಬೇರೆ, ನೀತಿಯೇ ಬೇರೆ. ಇಲ್ಲಿ ಪ್ರೀತಿಗಲ್ಲದೆ ಭೀತಿಗೆ ಒಂದಿನಿತೂ ಅವಕಾಶವಿರುವುದಿಲ್ಲ. ಅದು ಮತ-ಪ್ರಚಾರದ ಸಂಸ್ಥೆಯಲ್ಲ, ಧರ್ಮಪ್ರಚಾರ ಸಂಸ್ಥೆ. ಅದರ ಉದ್ದೇಶ ಇತರ ವಿದೇಶೀಯ ಮತಸಂಸ್ಥೆಗಳಂತೆ ಮತಾಂತರಗೊಳಿಸುವುದಲ್ಲ. ಎಲ್ಲಾ ಮತಗಳೂ ಭಗವಂತನೆಡೆಗೆ ಭಕ್ತನನ್ನು ಕರೆದೊಯ್ಯುವ ವಿವಿಧ ಪಥಗಳು ಎಂಬುದೇ ಅದರ ದೃಢ ವಿಶ್ವಾಸ.''

*(‘ವಚನವೇದ’ದ ಮುನ್ನುಡಿಯಿಂದ)*

ಹೀಗೆ ಇಲ್ಲಿಯ ಧಾರ್ಮಿಕ ವಾತಾವರಣದ ಹಾಲಿನೊಂದಿಗೆ ಶ್ರೀರಾಮಕೃಷ್ಣ ಭಾವಧಾರೆಯು ಸಕ್ಕರೆಯಂತೆ ಬೆರತು ಹೋಯಿತು. ✽





